ಕಥೆ




## ಲಿಂಗರಾಜ ಸೊಟ್ಟಪ್ಪನವರ

ಕಲೆ: ಕೆ.ಆರ್. ಬಸವರಾಜಾಚಾರ್


# ವಖಾರ

ನಗರದ ಮುಖ್ಯ ಬೀದಿ. ಉದ್ದಕ್ಕೂ ಲಾರಿ ತುಂಬಿಕೊಂಡು ಬಂದಿದ್ದ ಮಂಗಳಮುಖಿಯರು. ಪುಣೆಯಿಂದ ಕಾರು, ಜೀಪು, ಬಸ್ಸುಗಳಲ್ಲಿ ಅವರ ಪಾಲಿನ ತಾಯಿಯನ್ನು ಕೊನೆಯದಾಗಿ ಕಾಣಲು ಬಂದಿದ್ದ ಪಾಪದ ಹುಡುಗಿಯರು. ತಾರಾ ಪ್ಲಾಜಾದ ಮುಂದೆ ಹೂಗಳಿಂದ ಅಲಂಕೃತವಾಗಿ ಮಲಗಿದ್ದ ತಾಯಿ.



ಆಯೀ... ಹೇ ಆಯೀ... ಎಂಬ ರೋದನ ಒಡಲಿನಿಂದ ಚಿಮ್ಮಿ ಮುಗಿಲು ಮುಟ್ಟುತ್ತಲಿತ್ತು. ಆ ರೋದನದ ಮಧ್ಯೆ ಎದೆಎದೆ ಬಡಿದುಕೊಂಡು ಯವ್ವೋ... ಯವ್ವೋ... ಎಂದು ದುಬ್ಬೀರ ಬಿದ್ದು ಹೊರಳಾಡುತಲಿದ್ದ. ದುಬ್ಬೀರನಿಗೂ ಇವಳಿಗೂ ಯಾತರ ನಂಟು ಎಂದು ನೆರೆದ ಜನಸ್ತೋಮದ ಮಿದುಳಿನಲ್ಲಿ ಯೋಚನೆ ಸುಳಿದಿರಬಹುದು. ಎದೆಯ ವಿಷಯವೆ ಬೇರೆ. ಯಾರ ಸೆರಗು ಯಾರು ಕಣ್ಣೀರು ವರೆಸಿತು... ಯಾರ ಪುಣ್ಯ ಯಾರನು ಹರಿಸಿತು... ಯಾರ ನೋವು ಯಾರ ಎದೆಯ ಕಲಕಿತು. ಮಿದುಳಿಗೆ ಎಟುಕದ ಅವೆಷ್ಟೋ ಸಂಗತಿಗಳನ್ನು ಪ್ರತಿ ಬೀದಿ ಬೀದಿ ಅಲಂಕರಿಸಿಕೊಂಡಿರುವಂತಹ ಅನಾಥಲೋಕ ಇದು. ಈ ಪಾಪದ ಹುಡುಗನ ಪಾಲಿಗೆ ಜನ್ಮಜನ್ಮಾಂತರದ ಅವ್ವ ಈ ತಾರಾಬಾಯಿ. ಕೊನೆಯದೆಂಬಂತೆ ಹೂವು ಮುಡಿದುಕೊಂಡು ಮುತ್ತೈದೆಯಾಗಿದ್ದಳು. ಅದೆಷ್ಟೋ ಹತಭಾಗಿನಿಯರ ಅಳಲು ಈ ನೆಲದ ಎದೆಯ ಕವಾಟಗಳನ್ನು ತಟ್ಟುತ್ತಲಿತ್ತು.

***

ಮೈಮೇಲೆ ರೇಷ್ಮೆ ತುಪ್ಪಳದ ಗೌನು ಬಿಟ್ಟರೆ ಒಳಗೆ ಏನೆಂದರೆ ಏನೂ ಇರಲಿಲ್ಲ. ಅಥವಾ ಹಾಗನಿಸಿತೋ...